


ಆಸ್ಟ್ರಿಯಾದ ಹೆಮ್ಮೆ ಕಲಾಪ್ರಪಂಚದ ಬೆರಗು ಈ 'ಕಿಸ್'

**ಗಂಡು ಹೆಣ್ಣಿನ ಚುಂಬನದ ಎಲ್ಲ ನವಿರು ಉದ್ರೇಕವನ್ನು ಸೆರೆಹಿಡಿದ 'ಕಿಸ್' ಪ್ರಸಿದ್ಧವಾಗಿರುವುದು ಕಲೆಯಲ್ಲಿನ ತನ್ನ ನಾವೀನ್ಯತೆಯ ಕಾರಣ. ಕಲಾಕಾರ ಕ್ಲಿಂಟ್, ಚಿನ್ನ–ಬೆಳ್ಳಿ ಮತ್ತು ಪ್ಲಾಟಿನಂನಂತಹ ದುಬಾರಿ ವಸ್ತುಗಳನ್ನು 'ಕಿಸ್' ಕಲಾಕೃತಿಯಲ್ಲಿ ಬಳಸಿದ್ದಾನೆ.**

ಆ ಸ್ಪರ್ಧೆಯಲ್ಲಿ ಸೆಣಸಿ ಹೊಸ ಪ್ರಕಾರದಲ್ಲಿ ಕಲೆಯನ್ನು ರಚಿಸಿ ಪ್ರಸಿದ್ಧನಾದವನು ಗುಸ್ತಾವ್ ಕ್ಲಿಮ್ಟ್ ಎಂಬ ಚಿತ್ರಕಾರ. ಆತ ರಚಿಸಿದ ಹಲವು ಪ್ರಸಿದ್ಧ ಕೃತಿಗಳಲ್ಲಿ 'ಕಿಸ್' ಎಂಬ ಕಲಾಕೃತಿ ಅತ್ಯಂತ ಪ್ರಸಿದ್ಧವಾದುದು. ಚಿನ್ನ, ಬೆಳ್ಳಿ, ಪ್ಲಾಟಿನಂ ಬಳಸಿ ರಚಿಸಲಾಗಿರುವ ಈ ಕೃತಿ ವಿಶ್ವದ ಅತ್ಯಂತ ಜನಪ್ರಿಯ ಕಲಾಕೃತಿಗಳಲ್ಲೊಂದು.

ಹೆಸರೇ ಹೇಳುವಂತೆ 'ಕಿಸ್' ಚುಂಬನದಲ್ಲಿ ಮೈಮರೆತಿರುವ ಗಂಡು–ಹೆಣ್ಣಿನ ಚಿತ್ರ. ಗಾಢ ಪ್ರೀತಿ, ಉನ್ಮಾದ, ಮೈಮರೆವಿನಲ್ಲಿ ಚುಂಬಿಸುತ್ತಿರುವ ಒಬ್ಬ ಬಲಿಷ್ಠ ಗಂಡಸು ಮತ್ತು ಅಷ್ಟೇ ತನ್ಮಯತೆಯಲ್ಲಿ ಮೈ ಮರೆತು ಆಲಿಂಗನದಲ್ಲಿರುವ ಹೆಂಗಸು, ಅವರ ಸುತ್ತಮುತ್ತಲಿನ ತರುಲತೆಗಳು, ಭೂಮಿ ಆಕಾಶಗಳು – ಇವೆಲ್ಲ ಇರುವ ಈ ಚಿತ್ರ ವಿಯೆನ್ನಾದ ಬೆಲ್ವೆಡೀರ್ ಕ್ಯಾಸಲ್‌ನಲ್ಲಿ ಕಾಣಸಿಗುತ್ತದೆ. ನಾವು ವಿಯೆನ್ನಾಗೆ ಹೋದ ದಿನ 'ಕಿಸ್' ಪ್ರದರ್ಶನದಲ್ಲಿದೆ ಎಂದು ಕೇಳಿ ನಮ್ಮೆಲ್ಲರಿಗೂ ಅತೀವ ಆನಂದವಾಯಿತು. ಇಲ್ಲದಿದ್ದಲ್ಲಿ ಪ್ಯಾರಿಸ್ಸಿಗೆ ತೆರಳಿ ಮೊನಲಿಸಾಳ ಚಿತ್ರವನ್ನು ನೋಡದೆ ಹಿಂತಿರುಗಿದಷ್ಟೇ ಬೇಸರವಾಗಿಬಿಡುತ್ತಿತ್ತೇನೋ.

ಮಧ್ಯಾಹ್ನದ ಹೊತ್ತಿಗೆ ಬೆಲ್ವೆಡೀರ್ ಕ್ಯಾಸಲ್ ಅನ್ನು ತಲುಪಿದೆವು. ಬೆಲ್ವೆಡೀರ್ ಕ್ಯಾಸಲ್ ಎನ್ನುವುದು ಜನರಲ್ ಆಗಿದ್ದ ಯೂಜೀನ್ ಎನ್ನುವ ಒಬ್ಬ ರಾಜಕುಮಾರನಿಗಾಗಿ 18ನೇ ಶತಮಾನದ ಶುರುವಾತಿನಲ್ಲಿ ಕಟ್ಟಿಸಿದ ಎರಡು ಬೃಹತ್ ಅರಮನೆಗಳು ಮತ್ತು ಅವುಗಳ ನಡುವಿನ ಒಂದು ಉದ್ಯಾನವನವಿರುವ ಪ್ರಾಂಗಣ. ಆ ಅರಮನೆಗಳ ಸಮುಚ್ಚಯವನ್ನು 'ಸಂರಕ್ಷಿತ ತಾಣ'ವೆಂದು ಯುನೆಸ್ಕೋ ಘೋಷಿಸಿದೆ. ಜೊಹಾನ್ ಲ್ಯೂಕಾಸ್ ವೊನ್ ಹಿಲ್ಡೆನ್ ಬ್ರಾಂಟ್ ಎಂಬ ವಾಸ್ತುಶಿಲ್ಪಿ ವಿನ್ಯಾಸ ಮಾಡಿರುವ ಆ ಎರಡು ಅರಮನೆಗಳಲ್ಲಿ ಸ್ವಲ್ಪ ಎತ್ತರದಲ್ಲಿರುವ ಅರಮನೆಯನ್ನು ಕಲಾ ಪ್ರದರ್ಶನದ ವೈಭವಕ್ಕೆಂದೇ ವಿನ್ಯಾಸಗೊಳಿಸಲಾಗಿದೆ. ಕೆಳಗಿನದನ್ನು ರಾಜಕುಮಾರ ಯೂಜೀನನ ಬೇಸಿಗೆ ಅರಮನೆಯನ್ನಾಗಿ ರೂಪಿಸಲಾಗಿತ್ತು. ಇದೀಗ ಅರಮನೆಯನ್ನು ತಾತ್ಕಾಲಿಕ ಕಲಾ ಪ್ರದರ್ಶನಗಳಿಗಾಗಿ ಬಳಸಲಾಗುತ್ತಿದೆ.

ಮೇಲಿನ ಬೆಲ್ವೆಡೀರ್ ಅರಮನೆಯಲ್ಲಿ ಸುಮಾರು 800 ವರ್ಷಗಳ ಅವಧಿಯಲ್ಲಿ ರಚಿಸಿದ ಸಾವಿರಾರು ಕಲಾಕೃತಿಗಳು ಪ್ರದರ್ಶನದಲ್ಲಿವೆಯಾದರೂ ಜನರ ಗಮನವನ್ನು ಸೂಜಿಗಲ್ಲಿನಂತೆ ಸೆಳೆವುದು 'ಕಿಸ್' ಕಲಾಕೃತಿ. ಅದು 6 x6 ಅಡಿ ಅಗಲದ ದೊಡ್ಡ ಪೇಂಟಿಂಗ್. ಆ ದೊಡ್ಡ ಪೇಂಟಿಂಗ್ ಅನ್ನು ಗೋಡೆಗೆ ಎತ್ತರದಲ್ಲಿ ನೇತು ಹಾಕಿ, ಇಡೀ ಒಂದು ಕೋಣೆಯನ್ನು ಆ ಕಲಾಕೃತಿಗಾಗಿಯೇ ಮೀಸಲಾಗಿಡಲಾಗಿದೆ. ನೂರಾರು ಜನರು ಕಿಕ್ಕಿರಿದು ನಿಂತು 'ಕಿಸ್' ಕಲಾಕೃತಿಯ ಎದುರು ನಿಂತು ಫೋಟೊ ತೆಗೆಸಿಕೊಳ್ಳಲು ತಮ್ಮ ಸರದಿಗೆ ಕಾಯುತ್ತಾರೆ.

ದೂರದಿಂದ ಏನೆಂಬುದು ಅರ್ಥವಾಗದ ನವೀನ ಮಾದರಿಯ ಆ ಕಲಾಕೃತಿ ತನ್ನ ಹೊಂಬಣ್ಣದ ಹೊಳಪಿನಿಂದ ಕಣ್ಣುಗಳನ್ನು ಸೆಳೆಯುತ್ತದೆ.